**<u>1 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ, ಬಾಗಲಕೋಟ, ಉಪಸ್ಥಿತಿ- ಜಮಖಂಡಿ</u>**

**ಸ್ಪೇಷಲ್ ಕೇಸ್ ನಂ. 5013/2023**
**ಪಿಡಬ್ಲ್ಯೂ-4**
**ಸಿಡಬ್ಲ್ಯೂ-16**

| | |
|---|---|
| ಹೆಸರು | : ಸೈಯದಅಲಿ ಸುಲ್ತಾನಸಾಬ ಬೀಳಗಿ |
| ವಯಸ್ಸು | : 49 ವರ್ಷ |
| ಉದ್ಯೋಗ | : ಎ ಎಸ್ ಐ ಜಮಖಂಡಿ ಗ್ರಾಮೀಣ ಠಾಣೆ |
| ವಾಸಸ್ಥಳ | : ಜಮಖಂಡಿ |

====

**<u>ಸಾಕ್ಷಿಗೆ ಇಂದು ದಿನಾಂಕ 01.04.2024 ರಂದು ಪ್ರಮಾಣವಚನ ಬೋಧಿಸಲಾಯಿತು.</u>**
**<u>ಮುಖ್ಯ ವಿಚಾರಣೆ: ಅಭಿಯೋಜನೆಯ ಪರ ಸರಕಾರಿ ಅಭಿಯೋಜಕರವರಿಂದ</u>**

18.07.2019 ರಿಂದ 07.09.2021 ರ ವರೆಗೆ ಸಾವಳಗಿ ಠಾಣೆಯಲ್ಲಿ ಎ ಎಸ್ ಐ ಆಗಿ ಕೆಲಸ ಮಾಡಿರುತ್ತೇನೆ.

2. ದಿನಾಂಕ 04.11.2019 ರಂದು ನಾನು ಠಾಣಾಧಿಕಾರಿ ಕರ್ತವ್ಯದಲ್ಲಿದ್ದಾಗ ತಮ್ಮ ಬೆರಳಚ್ಚುಪಡಿಸಿದ ದೂರನ್ನು ಅದರೊಂದಿಗೆ ದಾಳಿಪಂಚನಾಮೆ ಹಾಗೂ ಕಚ್ಚಾನಕಾಶೆ, ಇಬ್ಬರು ಆರೋಪಿತರು ಮತ್ತು ಮುದ್ದೆಮಾಲಿನೊಂದಿಗೆ ಹಾಜರುಪಡಿಸಿ, ಸಾವಳಗಿ ಠಾಣೆ ಮೊಕದ್ದಮೆ ಸಂಖ್ಯೆ-109/2019 ಎನ್.ಡಿ.ಪಿ.ಎಸ್. ಕಾಯ್ದೆ ಕಲಂ-20(b)(2)(b) ರಡಿಯಲ್ಲಿ ಪ್ರಕರಣ ದಾಖಲಿಸಿಕೊಂಡು, ಪ್ರ.ವ.ವರದಿಯನ್ನು ನ್ಯಾಯಾಲಯಕ್ಕೆ ಸಲ್ಲಿಸಿರುತ್ತೇನೆ. ಚಾ.ಸಾ.1 ರವರು ನೀಡಿದ **ದೂರನ್ನು ನಿ.ಪಿ.9 ಎಂದು, ಅದರಲ್ಲಿನ ಸಾಕ್ಷಿಯ ಸಹಿ ನಿ.ಪಿ.9(ಎ) ಎಂದು, ಪ್ರ.ವ.ವರದಿಯನ್ನು ನಿ.ಪಿ.10 ಎಂದು, ಸಾಕ್ಷಿಯ ಸಹಿ ನಿ.ಪಿ.10(ಎ)** ಎಂದು ಗುರ್ತಿಸಲಾಯಿತು. ಇಬ್ಬರೂ ಆರೋಪಿತರ ಸ್ವ-ಇಚ್ಛಾ ಹೇಳಿಕೆ ಪಡೆದಿರುತ್ತೇನೆ. ವಶಪಡಿಸಿಕೊಂಡ ಮುದ್ದೆಮಾಲನ್ನು ಸ್ವತ್ತಿನಪಟ್ಟಿಯಲ್ಲಿ ನಮೂದಿಸಿ, ನ್ಯಾಯಾಲಯಕ್ಕೆ ನಿವೇದಿಸಿಕೊಂಡಿರುತ್ತೇನೆ. ಆರೋಪಿತರನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ. ಚಾ.ಸಾ.4 ರಿಂದ 12 ರವರ ಹೇಳಿಕೆಗಳನ್ನು ಪಡೆದಿರುತ್ತೇನೆ. ದಾಳಿಕಾಲಕ್ಕೆ ಫೋಟೋ ತೆಗೆದ ಬಗ್ಗೆ ಚಾ.ಸಾ.13 ರವರು ಕಲಂ-65( ಬಿ)

ಪ್ರಮಾಣಪತ್ರವನ್ನು ಒದಗಿಸಿರುತ್ತಾರೆ. ಮುಂದಿನ ತನಿಖೆಯನ್ನು ಚಾ.ಸಾ.17 ರವರು ವಹಿಸಿಕೊಂಡಿರುತ್ತಾರೆ.

**ಪಾಟೀ ಸವಾಲುಃ ಆರೋಪಿಗಳ ಪರ ಶ್ರೀ ಎ ಎಂ ಎಂ ವಕೀಲರಿಂದ**

3. ಚಾ.ಸಾ.1 ರವರು ಆರೋಪಿ ಹಾಗೂ ಮುದ್ದೆಮಾಲಿನೊಂದಿಗೆ ಠಾಣೆಗೆ ಬಂದು, ಪಂಚನಾಮೆ ಮತ್ತು ದೂರನ್ನು ಹಾಜರುಪಡಿಸಿರುತ್ತಾರೆಂದು ಸುಳ್ಳು ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ. ಆರೋಪಿತರು ಯಾವುದೇ ಸ್ವ-ಇಚ್ಛಾ ಹೇಳಿಕೆ ನೀಡಿರುವುದಿಲ್ಲ ಅಂದರೆ ಸರಿಯಲ್ಲ. ಚಾ.ಸಾ.4 ರಿಂದ 12 ರವರು ನನ್ನ ಮುಂದೆ ಯಾವುದೇ ಹೇಳಿಕೆ ನೀಡಿಲ್ಲ ಅಂದರೆ ಸರಿಯಲ್ಲ. ಚಾ.ಸಾ.1 ನನ್ನ ಮೇಲಾಧಿಕಾರಿಯಿದ್ದು, ಅವರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ. ಆರೋಪಿಗೂ, ವಶಪಡಿಸಿಕೊಂಡ ಮುದ್ದೆಮಾಲಿಗೂ ಯಾವುದೇ ಸಂಬಂಧ ಇಲ್ಲದಿದ್ದರೂ ಸುಳ್ಳು ಪ್ರಕರಣ ದಾಖಲು ಮಾಡಿ, ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ. ಸುಳ್ಳು ತನಿಖೆ ಮಾಡಿರುತ್ತೇನೆ ಅಂದರೆ ಸರಿಯಲ್ಲ.

**ಮರುವಿಚಾರಣೆಃ- ಏನೂ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು)

ಓ. ಹೇ.ಕೇ. ಸರಿ ಅದೆ.

1 ನೇ ಅಪರ ಜಿಲ್ಲಾ ವ ಸತ್ರ ನ್ಯಾಯಾಧೀಶರು,
ಬಾಗಲಕೋಟ, ಉಪಸ್ಥಿತಿ ಜಮಖಂಡಿ.